**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 31/2025**

**ಚಾ.ಸಾಃ 1, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಸಂತೋಷ ಗೌಡ |
| ತಂದೆಯ ಹೆಸರು | ನಾರಾಯಣ ಗೌಡ |
| ವಯಸ್ಸು | 30 ವರ್ಷಗಳು |
| ಉದ್ಯೋಗ | ಕೂಲಿ |
| ವಾಸ್ತವ್ಯ | ಜಲವಳಕರ್ಕಿ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 25-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಅವರು ನಮ್ಮ ಊರಿನವರು. ಆರೋಪಿತರು ಮೊದಲಿನಿಂದಲೂ ನನ್ನೊಂದಿಗೆ ಸಣ್ಣಪುಟ್ಟ ವಿಚಾರಕ್ಕೆ ಜಗಳ ಮಾಡುತ್ತಿದ್ದರು.

ದಿನಾಂಕ 24-10-2024 ರಂದು ರಾತ್ರಿ 08-30 ಕ್ಕೆ ನಾನು ಮನೆಗೆ ಹೋಗಲು ಹುಂಚಿಹಿತ್ಲಕೇರಿ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದೆ. ನಾನು ಈ ರೀತಿ ನಡೆದುಕೊಂಡು ಹೋಗುತ್ತಿರುವಾಗ 4 ನೇ ಆರೋಪಿ ಬಂದು ನನಗೆ ಅಡ್ಡಹಾಕಿದನು. ಆತನ ಜೊತೆ 1 ರಿಂದ 3 ನೇ ಆರೋಪಿತರು ಇದ್ದರು. 1 ನೇ ಆರೋಪಿ ನನಗೆ ಬೋಳಿಮಗನೆ, ಸೂಳೆ ಮಗನೆ ಎಂದು ಬೈದನು. 2 ರಿಂದ 4 ನೇ ಆರೋಪಿತರು ನನ್ನನ್ನು ಕೈಯಿಂದ ಹಿಡಿದುಕೊಂಡಿದ್ದರು. ಆ ವೇಳೆಗೆ 1 ನೇ ಆರೋಪಿ ಒಂದು ಕಟ್ಟಿಗೆ ತುಂಡಿನಿಂದ ನನ್ನ ಎಡಗಾಲಿಗೆ ಹೊಡೆದರು. ಉಳಿದ 3 ಜನರು ನನಗೆ ಕೈಯಿಂದ ಹಲ್ಲೆ ಮಾಡಿದರು. ಆ ವೇಳೆಗೆ ನನ್ನ ತಂದೆ ಮತ್ತು ಚಿಕ್ಕಪ್ಪ ಸ್ಥಳಕ್ಕೆ ಬಂದಿದ್ದು ಆಗ 4 ಜನ ಆರೋಪಿತರು ಓಡಿ ಹೋಗಿರುತ್ತಾರೆ. ನಮ್ಮ ತಂದೆ ಮತ್ತು ಚಿಕ್ಕಪ್ಪ ಸೇರಿ ರಿಕ್ಷಾದಲ್ಲಿ ನನ್ನನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಆ ವೇಳೆಗೆ ಆಸ್ಪತ್ರೆಗೆ ಪೋಲೀಸರು ಬಂದಿದ್ದು ನನಗೆ ಬರೆಯಲು ಬರುತ್ತಿಲ್ಲವಾದ್ದರಿಂದ ಮಂಜುನಾಥ ಅಂಬಿಗ ಎಂಬುವವರ ಮೂಲಕ ನಡೆದ ವಿಚಾರವನ್ನು ಬರೆಸಿ ದೂರನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ನನ್ನನ್ನು ಹೆಚ್ಚಿನ ಚಿಕಿತ್ಸೆಗೆ ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

(ಈ ಹಂತದಲ್ಲಿ ತನಿಖಾಧಿಕಾರಿಗಳು ಇನ್ನು ಮುದ್ದೆಮಾಲನ್ನು ಹಾಜರುಪಡಿಸದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**